ಆದನ್ನು ಕನ್‌ಸಿಡರ ಮಾಡುತ್ತೇವೆ ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಹಾಗೇನೆ ಮಾನ್ಯ ಸಹಕಾರ ಮಂತ್ರಿಗಳು ರೈತರಿಗೆ ಕೊಟ್ಟರ ತಕ್ಕ ಪಾರ್ಟಿಟಮ್ ಲೋನನ್ನು ಮಿಡಿಯಂ ಲೋನಾಗಿ ಕನವರ್ಟ ಮಾಡಿಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಮೊನ್ನೆ ೧೪ ಜನಗಳ ಮೇಲೆ ದಾವಾಹಾಕಿದ್ದಾರೆ. ಆ ಜನಗಳು ಹೊಟ್ಟೆಗಿಲ್ಲದೆ ತೊಂದರೆ ಪಡುತ್ತಿರುವಾಗ ಅವರ ಮೇಲೆ ದಾವಹಾಕಿದರೆ ಅವರ ಗತಿ ಏನು? ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟು ಇವ್ವೊತ್ತು ಆ ಬಡ ಜನಗಳ ಮೇಲೆ ದಾವಾ ಹಾಕಿ ಅವರ ಮನೆಗಳನ್ನು ಜಫ್ತಿ ಮಾಡುವುದರಲ್ಲಿ ಅರ್ಥ ಇದೆಯೇ? ಈ ವಿಚಾರದಲ್ಲಿ ಸರ್ಕಾರ ವಿವೇಚನೆ ಮಾಡಬಾರದೇ?

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ನಿನುಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಮುಂಜೆ ಅವರು ದಾವಾ ಹಾಕಿರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಮೇಲೆ ಈ ರೀತಿಯಾಗಿದೆ.

ಅಧ್ಯಕ್ಷರು.— ಈಗ ನೀವು ವಿಷಯವನ್ನು ಹೇಳಿದ್ದೀರಿ. ನಾವು ಇದನ್ನು ಅವರಿಗೆ ತಿಳಿಸುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ನಾನು ಈಗ ಒಂದೂವರೆ ತಿಂಗಳ ಹಿಂದೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ. ಆ ಸೂಚನೆ ಏನೆಂದರೆ....

ಅಧ್ಯಕ್ಷರು.— ಈಗ ಅದನ್ನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಹೇಳದೇ ಹೋದರೆ ಹೇಗೆ ಗೊತ್ತಾಗುತ್ತದೆ?

ಅಧ್ಯಕ್ಷರು.— ರೂಲ್ಸ್ ಪ್ರಕಾರ ನಾಳೆಯಿಂದ ಒಂದೊಂದೇ ವಿಷಯ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಇದು ಬಹಳ ಮುಖ್ಯವಾದದ್ದು.

ಅಧ್ಯಕ್ಷರು.— ಸಭೆ ಸೇರುವುದಕ್ಕೆ ಒಂದು ಗಂಟೆ ಮುಂಚೆ ನನ್ನ ಛೇಂಬರಿಗೆ ಬಂದು ಈ ಬಗ್ಗೆ ಮಾತನಾಡಿ. ಇಲ್ಲಿ ಸುಮ್ಮನೆ ಕಾಲವನ್ನು ಏತಕ್ಕೆ ಹಾಳು ಮಾಡುತ್ತೀರಿ.

## SPREAD OF CHOLERA EPEDEMIC IN HASSAN DISTRICT ETC.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ನನ್ನ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳುವುದಕ್ಕೆ ಮುಂಚೆ ಮಾನ್ಯ ಆರೋಗ್ಯ ಸಚಿವರು ಇಲ್ಲಿ ಇರುವುದರಿಂದ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ

ರಾಜ್ಯದ ಬಹುತೇಕ ಎಲ್ಲಾ ಕಡೆಗಳಲ್ಲೂ ಕಾಲರಾ ಎಪಿಡಮಿಕ್ ಹರಡುತ್ತಿದೆ. ಹಾಸನಾ ಜಿಲ್ಲೆಯಲ್ಲಿ ಕೂಡ ಕೆಲವು ಸಾವುಗಳು ಆಗಿವೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಎಲ್ಲಾ ರೀತಿಯಿಂದಲೂ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಒಂದೊಂದು ಸಾರಿ ಕಷ್ಟವನ್ನು ಅನುಭವಿಸಿದ್ದೇವೆ. ಇನ್‌ಜಕ್ಷನ್ ಮಾಡುವುದಕ್ಕೆ ಅವರ ಹತ್ತಿರ ಸಂಬಂಧಪಟ್ಟ ಔಷಧೋಪಕರಣಗಳು ಇರುವುದಿಲ್ಲ. ವ್ಯಾಕ್ಸಿನ್ನಿಗೆ ಬರೆದಿದ್ದೇವೆ ಎಂದು ಡಿ. ಎಚ್. ಓ. ಹೇಳುತ್ತಾರೆ. ಜನಸಾಯುತ್ತಾರೆ. ಈಗ ರಾಜ್ಯದಲ್ಲಿ ಬಹುತೇಕ ಕಾಲರಾ ಹರಡುತ್ತಿದೆ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ಈ ಬಗ್ಗೆ ಕೃಟಗಾರಿಕಲ್ ಅಷ್ಯೂರೆನ್ಸ್ ಕೊಡಬೇಕು. ಈ ಕಾಲರಾವನ್ನು ತಡೆಗಟ್ಟುವುದಕ್ಕೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ಹಾಸನದಲ್ಲಿ ಸುಮಾರು ೫೫ ಜನಗಳಿಗೆ ಕಾಲರಾ ಅಟ್ಯಾಕ್ ಆಗಿ ಅದರಲ್ಲಿ ೨೩ ಜನ ಸತ್ತಿದ್ದಾರೆ ಎಂಡು ಗೊತ್ತಾಗಿದೆ. ಆದ್ದರಿಂದ ಅಲ್ಲಿ ಜನಗಳಿಗೆ ಎಲ್ಲರಿಗೂ ಇನಾಕ್ಯುಲೇಷನ್ ಮಾಡಿ ಅದನ್ನು ತಡಗಟ್ಟುವುದಕ್ಕೆ ಸೂಕ್ತಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿಹೋದರೆ ತೊಂದರೆಯಾಗುತ್ತದೆ. ಈಗ ದಿನೇ ದಿನೇ ಈ ಕಾಯಿಲೆ ಹೆಚ್ಚುವ ಸಂಭವ ಇರುವುದರಿಂದ ಈ ಬಗ್ಗೆ ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು.

**10-00 A. M.**

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಯವರು).— ಮಾನ್ಯ ಸ್ನೇಹಿತರುಗಳು ಹೇಳಿದ್ದು ನಿಜವಿದೆ. ಮಳೆ ಇಲ್ಲದೆ ಕೆಲವು ಕಡೆ ಕುಡಿಯುವ ನೀರಿನ ಅಭಾವದಿಂದ ರೋಗ ಹರಡುವ ಸಂಭವ ಜಾಸ್ತಿ ಇದೆ. ಇದರ ಬಗ್ಗೆ ಸರ್ಕಾರ ಸೂಕ್ತವಾದ ಕಾರ್ಯಕ್ರಮವನ್ನು ಈಗಾಗಲೇ ಕೈಗೊಂಡಿದೆ. ಸುಮಾರು ಮೂರು ತಿಂಗಳ ಹಿಂದೆ ಈ ವರ್ಷದ ಪರಿಸ್ಥಿತಿಯನ್ನು ನಿರೀಕ್ಷಣೆ ಮಾಡಿ ಸಂಬಂಧಪಟ್ಟ ಡೈರೆಕ್ಟರಿಗೆ ಮತ್ತು ಜಾಯಿಂಟ್ ಡೈರೆಕ್ಟರವರಿಗೆ ಬೇಕಾದಷ್ಟು ವ್ಯಾಕ್ಸಿನುಗಳನ್ನು ತರಿಸಿಟ್ಟು ಪ್ರಿವೆಂಟಿವ್ ಮೆಜರ್ಸ್ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ. ಹಾಗೆ ಏನಾದರೂ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಇದರ ಬಗ್ಗೆ ಕೆಲಸ ಮಾಡದಿದ್ದರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಉದಾಹರಣೆಗೆ ತುಮಕೂರಿನಲ್ಲಿ ಈ ರೀತಿ ಗ್ಯಾಸ್ಟ್ರೋ ಎಂಟಿಟಿಸ್ ರೋಗ ಬಂದಾಗ ಅವರಿಗೆ ಸರಿಯಾದ ಡೈರೆಕನ್ಸ್ ಕೊಟ್ಟಿದ್ದೇವೆ. I told them it is nonsense to assume that it is Gaster enteritis and told them to proceed on the assumption that it is Cholera and take preventive action. ಆದ್ದರಿಂದ ಇದರ ಬಗ್ಗೆ ಸಂಬಂಧಪಟ್ಟವರಿಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿರ್ದೇಶನಗಳನ್ನು ಕೊಟ್ಟಿದ್ದೇವೆ. ಈಗ ವೆಹಿಕ್ಯುಲರ್ ಪೊಸಿಶನ್ ಸಹ ಸರಿಯಾಗಿರುವುದರಿಂದ ಅವರು ಸರಿಯಾಗಿ ಕೆಲಸ ಮಾಡದಿದ್ದರೆ

ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಜಾಯಿಂಟ್ ಡೈರೆಕ್ಟರವರಿಗೆ ಹೇಳಿದ್ದೇನೆ. ಇವತ್ತು ಪುನಃ ತಾವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಅವರಿಗೆ ತಿಳಿಸುತ್ತೇನೆ. ಮುಳೆ ಜಾಗ್ರತೆ ಬಾರದಿದ್ದರೆ, ಈ ರೋಗ ಹೆಚ್ಚಾಗಿ ಆಗತಕ್ಕಂತಹ ಸಿಂಪ್ಟಮ್ಸ್ ಎಲ್ಲಾ ಕಡೆಗಳಲ್ಲಿಯೂ ಇದೆ. ಅದರಲ್ಲೂ ಗುಲ್ಬರ್ಗ ಪ್ರದೇಶದಲ್ಲಿ ಮೂರು ನಾಲ್ಕು ತಿಂಗಳ ಹಿಂದೆ ಇದಕ್ಕೆ ಬೇಕಾದಂತಹ ಕ್ರಮ ತೆಗೆದುಕೊಂಡು ಬೇಕಾದಷ್ಟು ವ್ಯಾಕ್ಸಿನುಗಳನ್ನು ಸ್ಟಾಕ ಮಾಡಿಕೊಂಡಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಹಾಸನದ ಡಿ. ಎಚ್. ಓ. ರವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಬಂದಂತಹ ರೋಗಿಗಳ ಬಗ್ಗೆ ಸರಿಯಾದ ಗಮನ ಕೊಡದೆ ಬರೀ ಹಣ ಸಂಗ್ರಹ ಮಾಡುವುದರಲ್ಲಿಯೇ ತಲ್ಲೀನರಾಗಿರುತ್ತಾರೆ. ಅಂಥವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಸಿದ್ದವೀರಪ್ಪ.— ಹಾಸನದ ಡಿ. ಎಚ್. ಓ. ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ನಮ್ಮ ಗಮನಕ್ಕೆ ಬಂದಿದೆ. ಅವರನ್ನು ಕೂಡಲೇ ಟ್ರಾನ್ಸ್‌ಫರ ಮಾಡುವುದಕ್ಕೆ ಆರ್ಡರ್ ಮಾಡಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.— ಬೇರೆ ಕಡೆಗಳಲ್ಲಿಯೂ ಸಹ ಡಾಕ್ಟರು ಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ.

## QUESTION OF PRIVILEGE AGAINST THE MINISTER FOR LABOUR

re : Purchase of chassis by the M. S. R. T. C. and Selection of a site for M. S. R. T. C. workshop at Raichur.

†ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಸಭಾಧ್ಯಕ್ಷಣಿಯವರೆ, ನಾನು ಮಾನ್ಯ ಸಾರಿಗೆ ಸಚಿವರು ಮಾನ್ಯ ಅಂದಾನಯ್ಯನವರ ಪ್ರಶ್ನೆಗೆ ಚಾಸಿಸ್ ಪರ್ಚೇಸ ಮಾಡುವುದರ ಬಗ್ಗೆ ಈ ಸಭೆಯಲ್ಲಿ ಕೊಟ್ಟಂತಹ ತಪ್ಪು ಉತ್ತರದ ಬಗ್ಗೆ ಒಂದು ಪ್ರಿವಿಲೆಜ್ ಮೋಷನನ್ನು ಎತ್ತಲು ತಮ್ಮ ಪರವಾನಿಗೆಯನ್ನು ಕೇಳುತ್ತೇನೆ. ಮಾನ್ಯ ಸಾರಿಗೆ ಸಚಿವರು ೨೯-೩-೧೯೭೩ ರಂದು ಅಂದಾನಯ್ಯನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಕೆಲವು ತಪ್ಪು ವಿವರಗಳನ್ನು ಕೊಟ್ಟು ಈ ಸಭೆಯ ಹಕ್ಕು ಭಾದ್ಯತೆಗಳಿಗೆ ಚ್ಯುತಿ ತಂದಿದ್ದಾರೆ. ಇದರ ಬಗ್ಗೆ ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪ ನವರು, ಮಾನ್ಯ ಅರ್ಮುಗಂ ರವರು ಮತ್ತು ಮಾನ್ಯ ಶಾಮಣ್ಣನವರು ಒಂದು ಪ್ರಿವಿಲೆಜ್ ಮೋಷನನ್ನು ಕೊಟ್ಟಿದ್ದೆವು. ಈ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ತಮ್ಮ ಪರವಾನಿಗೆಯನ್ನು ಕೇಳುವ ಸಂದರ್ಭದಲ್ಲಿ ನನಗೆ ದೊರೆತಂತಹ ಕೆಲವು ಮಾಹಿತಿಗಳನ್ನು ಈ ಸಭೆಯ ಮುಂದಿಟ್ಟರೆ ಇದನ್ನು ಹಕ್ಕುಭಾದ್ಯತಾ ಸಮಿತಿಯವರು ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಮತ್ತು ಈ ಒಂದು